ಶ್ರೀ ಬಾಲಚಂದ್ರ ಲ. ಜಾರಕಿ ಹೊಳಿ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು) :–

ಅ) 2011ರ ಜನಗಣತಿ ಕಾರ್ಯ ಮುಗಿದಿರುತ್ತದೆ. ಆದರೆ ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಹಾಗೂ ಜನಗಣತಿ ಆಯುಕ್ತರು ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಜನಗಣತಿಯ ಅಂಕಿ–ಅಂಶಗಳನ್ನು ಅಧಿಕೃತವಾಗಿ ಪ್ರಕಟಿಸಿರುವುದಿಲ್ಲ. ಅಧಿಕೃತವಾಗಿ ಪ್ರಕಟಿಸಿದ ನಂತರ ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳನ್ನು ಪಟ್ಟಣ ಪಂಚಾಯತಿಯನ್ನಾಗಿ ರಚಿಸುವ ಬಗ್ಗೆ ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3, 9 ಮತ್ತು 349 ರನ್ವಯ ವಿಷಯವನ್ನು ನಿಯಮಾನುಸಾರ ಪರಿಶೀಲಿಸಲಾಗುವುದು.

ಆ) – ಮೇಲಿನಂತೆ –

ಮತ್ಸ್ಯ ಆಶ್ರಯ ಯೋಜನೆ ಮತ್ತು ಇತರೆ ಕಾಮಗಾರಿಗಳು

279 (622) ಶ್ರೀ ಖಾದರ್ ಯು.ಟಿ. (ಮಂಗಳೂರು) :– ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ ಮೂರು ವರ್ಷಗಳಿಂದ ಮತ್ಸ್ಯ ಆಶ್ರಯ ಯೋಜನೆ ಯಡಿಯಲ್ಲಿ ಸರ್ಕಾರ ನಿರ್ಮಿಸಿರುವ ಮನೆಗಳ ಸಂಖ್ಯೆ ಎಷ್ಟು (ವರ್ಷವಾರು, ಕ್ಷೇತ್ರವಾರು ಮಾಹಿತಿ ಒದಗಿಸುವುದು);

ಆ) ಕಳೆದ ಮೂರು ವರ್ಷಗಳಿಂದ ಮೀನುಗಾರಿಕಾ ಇಲಾಖಾ ವತಿಯಿಂದ ಕೈಗೊಂಡ ಕಾಮಗಾರಿಗಳು ಯಾವುವು;

ಇ) ಕೇಂದ್ರ ಸರ್ಕಾರ ಪ್ರತಿ ವರ್ಷ ಬಿಡುಗಡೆ ಮಾಡುತ್ತಿರುವ ಹಣವೆಷ್ಟು;

ಈ) ಈ ಹಣದಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಕಾಮಗಾರಿಗಳೇನು (ವಿವರ ಒದಗಿಸುವುದು)?

ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :–

ಅ) 2008–09ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ 1000 ಮನೆಗಳು ಹಾಗೂ 2009–10ನೇ ಸಾಲಿನಲ್ಲಿ ರಾಜ್ಯ ಮತ್ಸ್ಯಾಶ್ರಯ ಯೋಜನೆಯಡಿ 5000 ಮನೆಗಳು ಮಂಜೂರಾಗಿದ್ದು ಅವುಗಳಲ್ಲಿ ಇದುವರೆವಿಗೆ ಅನುಕ್ರಮವಾಗಿ 690

ಮತ್ತು 1417 ಮನೆಗಳು ಪೂರ್ಣಗೊಂಡಿರುತ್ತವೆ.

ವಿಧಾನ ಸಭಾ ಕ್ಷೇತ್ರವಾರು ಪೂರ್ಣಗೊಂಡ ಮನೆಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

2010–11ನೇ ಸಾಲಿನಲ್ಲಿ ಯಾವುದೇ ಮನೆಗಳನ್ನು ಮಂಜೂರು ಮಾಡಿರುವುದಿಲ್ಲ.

ಆ) ಮೀನುಗಾರಿಕೆ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಕೈಗೊಂಡ ವಿವಿಧ ಕಾಮಗಾರಿಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಇ) ಕಳೆದ 3 ವರ್ಷಗಳಿಂದ ಕೇಂದ್ರ ಸರ್ಕಾರವು ಕಾಮಗಾರಿಗಳಿಗೆ ರಾಜ್ಯಕ್ಕೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಕೆಳಗಿನಂತಿವೆ.

ರೂ.ಲಕ್ಷಗಳಲ್ಲಿ

ಕ್ರ.ಸಂ.	ವರ್ಷ	ಕಾಮಗಾರಿಗಳಿಗೆ ಬಿಡುಗಡೆಯಾದ ಮೊತ್ತ
1	2008–09	ಇಲ್ಲ
2	2009–10	108.415
3	2010–11	825.00

ಈ) 2008–09ನೇ ಸಾಲಿನಲ್ಲಿ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

2009–10ನೇ ಸಾಲಿನಲ್ಲಿ ಅಳ್ವೆಕೋಡಿ ಮೀನುಗಾರಿಕೆ ಜೆಟ್ಟಿಗಳ ನಿರ್ಮಾಣ ಯೋಜನೆಗೆ ರೂ. 101.995 ಲಕ್ಷ ಮತ್ತು ತದಡಿ ಮೀನುಗಾರಿಕೆ ಬಂದರಿನ ನವೀಕರಣದ ಉಳಿದ ಕಾಮಗಾರಿಗಳಿಗೆ ರೂ. 6.42 ಲಕ್ಷ ಬಿಡುಗಡೆಯಾಗಿರುತ್ತದೆ.

2010–11ನೇ ಸಾಲಿನಲ್ಲಿ ಮಲ್ಪೆ ಮತ್ತು ಮಂಗಳೂರು ಮೀನುಗಾರಿಕೆ ಬಂದರುಗಳು 3ನೇ ಹಂತದ ಕಾಮಗಾರಿಗಳನ್ನು ಕೈಗೊಳ್ಳಲು ರೂ. 800.00 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಭಟ್ಕಳ, ಕೋಡಿಬೆಂಗ್ರೆ ಮತ್ತು ಹಂಗಾರಕಟ್ಟೆ ಮೀನುಗಾರಿಕೆ ಜೆಟ್ಟಿಗಳ ಹೂಳೆತ್ತಲು ರೂ. 25.00 ಲಕ್ಷ ಬಿಡುಗಡೆಗೊಳಿಸಲಾಗಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಯು.ಟಿ. ಖಾದರ್ (ಮಂಗಳೂರು)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 622 ಕ್ಕೆ ಅನುಬಂಧ–6

2008–09ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಮಂಜೂರಾದ 1000 ಮನೆಗಳಲ್ಲಿ ಮತ್ತು 2009–10 ರಲ್ಲಿ ರಾಜ್ಯ ಮತ್ಸ್ಯಾಶ್ರಯ ಯೋಜನೆಯಡಿ ಮಂಜೂರಾದ 5000 ಮನೆಗಳಲ್ಲಿ ವಿಧಾನಸಭಾ ಕ್ಷೇತ್ರವಾರು ಪೂರ್ಣಗೊಂಡಿರುವ ಮನೆಗಳ ವಿವರ

ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	2008–09	2009–10
	ಉಡುಪಿ ಜಿಲ್ಲೆ		
1	ಕಾಪು	40	86
2	ಉಡುಪಿ	40	136
3	ಕುಂದಾಪುರ	35	201
4	ಬೈಂದೂರು	31	76
5	ಕಾರ್ಕಳ	04	18
	ದಕ್ಷಿಣ ಕನ್ನಡ ಜಿಲ್ಲೆ		
6	ಮಂಗಳೂರು ಸಿಟಿ ಸೌತ್	04	07
7	ಮಂಗಳೂರು	04	05
8	ಬಂಟ್ವಾಳ	04	04
9	ಪುತ್ತೂರು	05	02
10	ಸೂಳ್ಯ	–	–
11	ಬೆಳ್ತಂಗಡಿ	04	05
12	ಮೂಡಬಿದರೆ	03	05
	ಉತ್ತರ ಕನ್ನಡ ಜಿಲ್ಲೆ		
13	ಕಾರವಾರ	60	267
14	ಕುಮಟ	13	82
15	ಭಟ್ಕಳ	10	75
16	ಹಳ್ಯಾಳ	–	16

1	2	3	4
17	ಸಿರಸಿ	03	03
18	ಯಲ್ಲಾಪುರ	02	03
19	ಅಂಕೋಲ	24	–
	ಚಿಕ್ಕಮಗಳೂರು ಜಿಲ್ಲೆ		
20	ಕಡೂರು	02	05
21	ತರಿಕೆರೆ	–	–
22	ಶೃಂಗೇರಿ	04	–
23	ಮೂಡಿಗೆರೆ	04	05
24	ಚಿಕ್ಕಮಗಳೂರು	04	–
	ಚಿತ್ರದುರ್ಗ		
25	ಚಿತ್ರದುರ್ಗ	02	–
26	ಹೊಸದುರ್ಗ	03	–
27	ಹಿರಿಯೂರು	01	–
28	ಮೊಳಕಾಲ್ಮೂರು	04	02
29	ಚಳ್ಳಕೆರೆ	–	02
30	ಹೊಳಲ್ಕೆರೆ	02	–
	ದಾವಣಗೆರೆ ಜಿಲ್ಲೆ		
31	ಚನ್ನಗಿರಿ	04	18
32	ಹೊನ್ನಾಳಿ	04	06
33	ಹರಿಹರ	04	42
34	ಜಗಳೂರು	04	12
35	ಹರಪನಹಳ್ಳಿ	03	11
36	ದಾವಣಗೆರೆ (ಸೌತ್)	04	10
37	ದಾವಣಗೆರೆ (ನಾರ್ಥ)	04	10
38	ಮಾಯಕೊಂಡ	04	10
	ಶಿವಮೊಗ್ಗ ಜಿಲ್ಲೆ		
39	ಶಿವಮೊಗ್ಗ (ಗ್ರಾಮೀಣ)	04	14

1	2	3	4
40	ಶಿವಮೊಗ್ಗ	04	01
41	ಸಾಗರ	04	06
42	ಸೊರಬ	02	04
43	ಶಿಕಾರಿಪುರ	04	12
44	ಭದ್ರಾವತಿ	04	23
45	ತೀರ್ಥಹಳ್ಳಿ	04	12
	ಚಾಮರಾಜನಗರ ಜಿಲ್ಲೆ		
46	ಗುಂಡ್ಲುಪೇಟೆ	02	08
47	ಚಾಮರಾಜನಗರ	04	04
48	ಕೊಳ್ಳೇಗಾಲ	01	07
49	ಹನೂರು	03	07
	ಹಾಸನ ಜಿಲ್ಲೆ		
50	ಅರಸೀಕೆರೆ	01	0
51	ಹಾಸನ	03	0
52	ಅರಕಲಗೂಡು	01	0
53	ಬೇಲೂರು	01	0
54	ಹೊಳೇನರಸೀಪುರ	02	0
55	ಶ್ರವಣಬೆಳಗೊಳ	–	0
56	ಸಕಲೇಶಪುರ	–	05
	ಮಂಡ್ಯ ಜಿಲ್ಲೆ		
57	ಮಂಡ್ಯ	04	0
58	ಮದ್ದೂರು	04	10
59	ಕೆ.ಆರ್. ಪೇಟೆ	03	02
60	ಮಳವಳ್ಳಿ	01	06
61	ಶ್ರೀರಂಗಪಟ್ಟಣ	03	18
62	ನಾಗಮಂಗಲ	02	04
63	ಮೇಲುಕೋಟೆ	04	14

1	2	3	4
	ಮೈಸೂರು ಜಿಲ್ಲೆ		
64	ಹುಣಸೂರು	02	10
65	ಟಿ. ನರಸೀಪುರ	02	07
66	ನಂಜನಗೂಡು	02	07
67	ಪಿರಿಯಾಪಟ್ಟಣ	–	04
68	ಹೆಚ್.ಡಿ. ಕೋಟೆ	04	08
69	ಕೃಷ್ಣರಾಜನಗರ	04	11
70	ವರುಣಾ	–	06
71	ಚಾಮುಂಡೇಶ್ವರಿ	03	10
	ಕೊಡುಗು ಜಿಲ್ಲೆ		
72	ಮಡಿಕೇರಿ	03	–
73	ವಿರಾಜಪೇಟೆ	02	05
	ಬೆಂಗಳೂರು ನಗರ ಜಿಲ್ಲೆ		
74	ಕೃಷ್ಣರಾಜಪುರ	04	–
75	ಯಲಹಂಕ	03	–
	ಬೆಂಗಳೂರು ಗ್ರಾಮಾಂತರ ಜಿಲ್ಲೆ		
76	ನೆಲಮಂಗಲ	–	05
77	ದೊಡ್ಡಬಳ್ಳಾಪುರ	–	–
	ರಾಮನಗರ ಜಿಲ್ಲೆ		
78	ಮಾಗಡಿ	03	06
79	ರಾಮನಗರ	03	07
80	ಕನಕಪುರ	04	07
81	ಚನ್ನಪಟ್ಟಣ	02	05
	ಕೋಲಾರ ಜಿಲ್ಲೆ		
82	ಮುಳಬಾಗಿಲು	–	02
83	ಬಂಗಾರಪೇಟೆ	01	07
84	ಕೋಲಾರ	02	04

1	2	3	4
85	ಕೆ.ಜಿ.ಎಫ್	01	08
86	ಮಾಲೂರು	01	02
87	ಶ್ರೀನಿವಾಸಪುರ	03	04
	ಚಿಕ್ಕಬಳ್ಳಾಪುರ ಜಿಲ್ಲೆ		
88	ಗೌರಿಬಿದನೂರು	04	01
89	ಶಿಡ್ಲಘಟ್ಟ	03	02
90	ಚಿಕ್ಕಬಳ್ಳಾಪುರ	04	04
91	ಬಾಗೇಪಲ್ಲಿ	03	08
92	ಚಿಂತಾಮಣಿ	02	03
	ತುಮಕೂರು ಜಿಲ್ಲೆ		
93	ಕುಣಿಗಲ್	02	03
94	ತಿಪಟೂರು	01	05
95	ಕೊರಟಗೆರೆ	04	02
96	ತುರುವೇಕೆರೆ	–	03
97	ಗುಬ್ಬಿ	04	09
98	ಶಿರಾ	03	10
99	ಚಿಕ್ಕನಾಯಕನಹಳ್ಳಿ	03	09
100	ಪಾವಗಡ	03	08
101	ಮಧುಗಿರಿ	–	01
102	ತುಮಕೂರು	03	10
	ಬಳ್ಳಾರಿ ಜಿಲ್ಲೆ		
103	ಸಿರಿಗುಪ್ಪ	–	–
104	ಹಗರಿಬೊಮ್ಮನಹಳ್ಳಿ	04	08
105	ಹಡಗಲಿ	04	23
106	ಕೂಡ್ಲಿಗಿ	05	–
107	ವಿಜಯನಗರ	01	–
108	ಸಂಡೂರು	04	04

1	2	3	4
109	ಕಂಪ್ಲಿ	–	02
110	ಬಳ್ಳಾರಿ ಗ್ರಾಮೀಣ	01	01
	ಬೀದರ್ ಜಿಲ್ಲೆ		
111	ಬಸವಕಲ್ಯಾಣ	04	–
112	ಬಾಲ್ಕಿ	04	01
113	ಔರಾದ್	–	04
114	ಬೀದರ್ ನಗರ	–	–
115	ಬೀದರ್ ಗ್ರಾಮೀಣ	–	–
116	ಹುಮನಾಬಾದ್	04	–
	ಗುಲ್ಬರ್ಗಾ ಜಿಲ್ಲೆ		
117	ಜೇವರ್ಗಿ	04	–
118	ಗುಲ್ಬರ್ಗಾ ಗ್ರಾಮೀಣ	–	15
119	ಅಫ್ಜಲ್‌ಪುರ	04	10
120	ಆಳಂದ	–	–
121	ಚಿಂಚೋಳಿ	–	–
122	ಚಿತ್ತಾಪುರ	04	20
123	ಸೇಡಮ್	–	–
	ಯಾದಗಿರಿ ಜಿಲ್ಲೆ		
124	ಶಹಾಪುರ	04	–
125	ಗುರುಮಿಟ್ಕಲ್	–	–
126	ಸೂರಪುರ	01	02
127	ಯಾದಗಿರಿ	–	–
	ಕೊಪ್ಪಳ		
128	ಗಂಗಾವತಿ	04	19
129	ಕೊಪ್ಪಳ	04	05
130	ಕನಕಗಿರಿ	04	10
131	ಯಲಬುರ್ಗಾ	02	05

1	2	3	4
132	ಕುಷ್ಟಗಿ	04	–
	ರಾಯಚೂರು		
133	ದೇವದುರ್ಗ	01	–
134	ಮಾನ್ವಿ	–	–
135	ಸಿಂಧನೂರು	–	01
136	ರಾಯಚೂರು ಗ್ರಾಮೀಣ	–	24
137	ಲಿಂಗಸಗೂರು	01	05
138	ಮಸ್ಕಿ	01	03
	ಬಾಗಲಕೋಟೆ ಜಿಲ್ಲೆ		
139	ಬಾದಾಮಿ	03	09
140	ಹುನಗುಂದ	01	11
141	ಬಾಗಲಕೋಟೆ	02	09
142	ಬಿಳಗಿ	–	02
143	ಜಮಖಂಡಿ	04	09
144	ಮುಧೋಳ	04	–
145	ತೆರೆದಾಳ	04	–
	ಬೆಳಗಾವಿ ಜಿಲ್ಲೆ		
146	ಬೈಲಹೊಂಗಲ	04	13
147	ಬೆಳಗಾವಿ ಗ್ರಾಮೀಣ	–	04
148	ಯಮಕನ ಮರಡಿ	02	09
149	ಕುಡಚಿ	05	19
150	ಸೌದತ್ತಿ ಯಲ್ಲಮ್ಮ	04	04
151	ರಾಯಭಾಗ್	04	17
152	ಖಾನಾಪುರ	02	04
153	ಚಿಕ್ಕೋಡಿ ಸಡಲಗ	04	11
154	ಹುಕ್ಕೇರಿ	03	09
155	ರಾಮದುರ್ಗ	03	05

1	2	3	4
156	ಕಿತ್ತೂರು	04	03
157	ಅರಭಾವಿ	10	06
158	ಗೋಕಾಕ್	02	03
159	ಅಥಣಿ	–	08
	ಬಿಜಾಪುರ ಜಿಲ್ಲೆ		
160	ಸಿಂಧಗಿ	04	09
161	ಮುದ್ದೇಬಿಹಾಳ	02	02
162	ದೇವರ ಹಿಪ್ಪರಗಿ	01	03
163	ಬಿಜಾಪುರ (ನಗರ)	–	01
164	ಇಂಡಿ	03	06
165	ನಾಗಟಾನ	02	04
166	ಬಸವನ ಬಾಗೇವಾಡಿ	04	–
167	ಭಭಲೇಶ್ವರ	02	05
	ಧಾರವಾಡ ಜಿಲ್ಲೆ		
168	ಕಲಘಟಗಿ	02	–
169	ಕುಂದಗೋಳ	–	04
170	ನವಲಗುಂದ	–	01
	ಗದಗ ಜಿಲ್ಲೆ		
171	ಶಿರಹಟ್ಟಿ	04	14
172	ಗದಗ	–	–
173	ರೋಣ	–	–
174	ನರಗುಂದ	03	08
	ಹಾವೇರಿ ಜಿಲ್ಲೆ		
175	ರಾಣಿ ಬೆನ್ನೂರು	04	10
176	ಹಾವೇರಿ	04	04
177	ಹಂಗಲ	03	12
178	ಸಿಗ್ಗಾಂವ ಸವಣೂರು	11	09

1	2		3	4
179	ಹಿರೆಕೆರೂರು		03	09
180	ಬ್ಯಾಡಗಿ		03	14
		ಒಟ್ಟು	**690**	**1417**

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಯು.ಟಿ. ಖಾದರ್ (ಮಂಗಳೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 622 ಕ್ಕೆ ಅನುಬಂಧ–2

ಮೀನುಗಾರಿಕೆ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ವಿವಿಧ ಕಾಮಗಾರಿಗಳ ವಿವರ

1. ಮಂಗಳೂರು, ಮಲ್ಪೆ ಕಾರವಾರ, ತದಡಿ ಮತ್ತು ಹೊನ್ನಾವರ ಮೀನುಗಾರಿಗಳ ಬಂದರುಗಳಲ್ಲಿ ಹೂಳೆತ್ತಲಾಗಿದೆ.
2. ಗಂಗೊಳ್ಳಿ ಮೀನುಗಾರಿಕೆ ಬಂದರಿನ ಕಾಮಗಾರಿಯನ್ನು ಪೂರ್ಣಗೊಳಿಸಿ ಉಪಯೋಗಿಸಲಾಗುತ್ತಿದೆ.
3. ಉತ್ತರ ಕನ್ನಡ ಜಿಲ್ಲೆಯ ಅಳ್ವೆಕೋಡಿ ಮೀನುಗಾರಿಕೆ ಇಳಿದಾಣ ಕೇಂದ್ರವನ್ನು ಪೂರ್ಣಗೊಳಿಸಿ ಉಪಯೋಗಿಸಲಾಗುತ್ತಿದೆ.
4. ಕುಳೈ – ಗುಂಡ್ಯಡ್ಯ ಸೇತುವೆ ಕಾಮಗಾರಿ ಪೂರ್ಣಗೊಳಿಸಲಾಗಿದೆ.
5. ಬೆಳಂಬರದಲ್ಲಿ ಮೀನುಗಾರಿಕೆ ತಂಗುದಾಣ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದ್ದು ಪ್ರಗತಿಯಲ್ಲಿದೆ.
6. ಹಂಗಾರಕಟ್ಟೆಯಲ್ಲಿ ಮೀನುಗಾರಿಕೆ ಜೆಟ್ಟಿ ನಿರ್ಮಾಣಕ್ಕೆ ಮಂಜೂರಾತಿ ನೀಡಿದ್ದು, ಕಾಮಗಾರಿ ಪ್ರಾರಂಭಿಸಬೇಕಿದೆ.
7. ಗಂಗಾವಳಿಯಲ್ಲಿ ಮೀನುಗಾರಿಕೆ ಜೆಟ್ಟಿ ಪೂರ್ಣಗೊಳಿಸಲಾಗಿದೆ.
8. ನಚುಕಿನ ಭಾಗದಿಂದ ದಂಡೆಭಾಗದವರೆಗೆ ರಸ್ತೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.
9. ಮಾಜಾಳಿ ರಮನಾಥ ಟೆಂಪಲ್ – ಬೀಚ್ ಬಾವಳ ರಸ್ತೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

10. ಬಾವಳದಿಂದ ದಂಡೆಬಾಗ್‌ವರೆಗೆ ರಸ್ತೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

11. ಮಂಜುಗುಣಿ ಹರಿಕಂತ್ರವಾಡ ರಸ್ತೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿದೆ.

12. ಕೋಡಿಕನ್ಯಾನ, ಗಂಗೊಳ್ಳಿ ಮತ್ತು ಬೇಲಿಕೇರಿಯಲ್ಲಿ ಜೆಟ್ಟಿಗಳ ನಿರ್ಮಾಣ ಕಾರ್ಯ ಕೈಗೊಂಡಿದ್ದು, ಪ್ರಗತಿಯಲ್ಲಿವೆ.

13. ಮಂಜುಗುಣಿ ಮತ್ತು ವನ್ನಳ್ಳಿಯಲ್ಲಿ ಮೀನುಗಾರಿಕೆ ಜೆಟ್ಟಿಗಳ ನಿರ್ಮಾಣ ಕಾರ್ಯಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

14. ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ಕಾಮಗಾರಿ ಕಾರ್ಯವನ್ನು ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದು, ಪ್ರಾರಂಭಿಸಬೇಕಿದೆ.

15. ಮಲ್ಪೆ ಮೀನುಗಾರಿಕೆ ಬಂದರಿನ 3ನೇ ಹಂತದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

16. ಹೆಜಮಾಡಿಕೋಡಿ ಮೀನುಗಾರಿಕೆ ತಂಗುದಾಣದಲ್ಲಿ ಹೂಳೆತ್ತುವ ಕಾಮಗಾರಿ ಪ್ರಗತಿಯಲ್ಲಿದೆ.

17. ಗಂಗೊಳ್ಳಿ ಮೀನುಗಾರಿಕೆ ಬಂದರಿನಲ್ಲಿ ಹೂಳೆತ್ತುವ ಕಾಮಗಾರಿ ಕೈಗೊಳ್ಳಲು ಟೆಂಡರು ಕರೆಯಬೇಕಿದೆ.

18. ಹಂಗಾರಕಟ್ಟೆ, ಕೋಡಿಬೆಂಗ್ರೆ ಮತ್ತು ಭಟ್ಕಳ ಬಂದರುಗಳಲ್ಲಿ ಹೂಳೆತ್ತುವ ಕಾಮಗಾರಿಗಳಿಗೆ ಮಂಜೂರಾತಿ ನೀಡಿದ್ದು, ಟೆಂಡರ್ ಮೂಲಕ ಕೆಲಸ ನಿರ್ವಹಿಸಿಕೊಡಬೇಕಿದೆ.

19. ಮಂಗಳೂರು ಹಳೆ ಮೀನುಗಾರಿಕೆ ಬಂದರಿನ ಅಳಿವೆ ಬಾಗಿಲು ಮತ್ತು ಕಂಡತ್ತಪಳ್ಳಿ ಪ್ರದೇಶದಲ್ಲಿ ಹೂಳೆತ್ತುವ ಕಾಮಗಾರಿಕೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಟೆಂಡರ್ ಕರೆಯಬೇಕಿದೆ.

20. ಮೀನುಗಾರಿಕೆ ಕೊಂಡಿರಸ್ತೆಗಳ ಅಭಿವೃದ್ಧಿ ಕೈಗೊಳ್ಳಲಾಗಿದೆ.

21. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ ಆರ್ಥಿಕ ನೆರವಿನೊಂದಿಗೆ ಕಾರವಾರ ಮೀನುಗಾರಿಕೆ ಬಂದರಿನ ಅಭಿವೃದ್ಧಿ ಕಾಮಗಾರಿಗಳನ್ನು

ಪೂರ್ಣಗೊಳಿಸಲಾಗಿದ್ದು, ಹೊನ್ನಾವರ ಮೀನುಗಾರಿಕೆ ಬಂದರಿನ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ.

22. ಗಂಗೊಳ್ಳಿ ಮೀನುಗಾರಿಕೆ ಬಂದರಿನಲ್ಲಿ ಪ್ರಥಮ ಹಂತದ 63 ಮೀಟರ್ ಉದ್ದದ ತಡೆಗೋಡೆ ನಿರ್ಮಾಣ ಪೂರ್ಣಗೊಂಡಿದ್ದು, 2ನೇ ಹಂತದ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬೇಕಿದೆ.

23. ಹೊನ್ನಾವರ ಮೀನುಗಾರಿಕೆ ಬಂದರಿನ 2ನೇ ಹಂತದ ವಿಸ್ತರಣೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಕರೆದು ಕೆಲಸ ನಿರ್ವಹಿಸಬೇಕಿದೆ.

24. ಕೊಡೇರಿಯಲ್ಲಿ ಮೀನುಗಾರಿಕೆ ಇಳಿದಾಣ ಕೇಂದ್ರ ಕಾಮಗಾರಿ ಪ್ರಾರಂಭಿಸಲಾಗಿದೆ.

25. ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಮರವಂತೆಯಲ್ಲಿ ಕೇರಳ ಮಾದರಿಯ ಬಾಹ್ಯ ಬಂದರು ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಟೆಂಡರ್ ಅಂತಿಮಗೊಳಿಸಬೇಕಿದೆ.

26. ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಅಳ್ವೆಗದ್ದೆ ಮೀನುಗಾರಿಕೆ ತಂಗುದಾಣದಲ್ಲಿ ತಡೆಗೋಡೆಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಿದ್ದು, ಟೆಂಡರ್ ಮೂಲಕ ಕೆಲಸ ನಿರ್ವಹಿಸಬೇಕಿದೆ.

27. ಕುಂದಾಪುರ ತಾಲ್ಲೂಕು, ಕುಂದಾಪುರ ಕೋಡಿಯಲ್ಲಿ ಮೀನುಗಾರಿಕೆ ಜೆಟ್ಟಿ ನಿರ್ಮಾಣಕ್ಕೆ ಮಂಜೂರಾತಿ ನೀಡಿದ್ದು, ಕಾಮಗಾರಿ ಕೈಗೊಳ್ಳಲು ಟೆಂಡರ್ ಕರೆಯಬೇಕಿದೆ.

28. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಅಳ್ವೆಕೋಡಿ ಮೀನುಗಾರಿಕೆ ಇಳಿದಾಣದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಕರೆಯಬೇಕಿದೆ.

29. ಭಟ್ಕಳ ತಾಲ್ಲೂಕಿನ ತೆಂಗಿನ ಗುಂಡಿ ಮೀನುಗಾರಿಕೆ ಇಳಿದಾಣದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಮೂಲಕ ಕೆಲಸ ನಿರ್ವಹಿಸಿಕೊಡಬೇಕಿದೆ.